ಕನಕಪುರ ತಾಲ್ಲೂಕು ಹಾರೋಬೆಲೆ ಜಲಾಶಯ

೩೮೨ (೭೫೭) ಶ್ರೀ ಕೆ. ಎಲ್. ಶಿವಲಿಂಗೇಗೌಡ (ಸಾತನೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕನಕಪುರ ತಾಲ್ಲೂಕು ಹಾರೋಬೆಲೆ ಬಳಿ ಅರ್ಕಾವತಿ ನದಿಗೆ ಜಲಾಶಯ ನಿರ್ಮಾಣ ಕಾರ್ಯ ಪ್ರಾರಂಭವಾಗಿ ಎಷ್ಟು ವರ್ಷಗಳಾಯ್ತು ?

ಆ) ಈಗ ಜಲಾಶಯ ನಿರ್ಮಾಣ ಕಾರ್ಯ ಯಾವ ಹಂತದಲ್ಲಿದೆ ಹಾಗೂ ಇನ್ನೂ ಎಷ್ಟು ದಿವಸಗಳಲ್ಲಿ ನಿರ್ಮಾಣ ಕಾರ್ಯ ಮುಗಿಯುತ್ತದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ೧೯೭೫ರಲ್ಲಿ ಪ್ರಾರಂಭವಾಯಿತು.

ಆ) ಜಲಾಶಯದ ಎಡ ಭಾಗದ ಮಣ್ಣಿನ ಏರಿಯ ಕಾಮಗಾರಿಯ ಮೊದಲನೇ ಹಂತದ ಕೆಲಸಗಳು ಮುಗಿದಿವೆ. ಹಾಗೂ ನದಿಯ ಪಾತ್ರದ ಮೊದಲನೇ ಹಂತದ ಏರಿಯ ಕಾಮಗಾರಿಯು ಸ್ವಲ್ಪ ಭಾಗ ಉಳಿದಿದೆ. ಜಲಾಶಯದ ಕಾಂಕ್ರೀಟ್ ಅಣೆಕಟ್ಟೆಯ ತಳಪಾಯದ ಆಗೆತದ ಕೆಲಸವು ಮುಗಿಯುವ ಹಂತದಲ್ಲಿದೆ ಮತ್ತು ಅಣೆಕಟ್ಟೆಯ ಮೊದಲನೇ ಹಂತದ ಕಾಂಕ್ರೀಟ್ ಕೆಲಸವು ಉಳಿದಿದೆ. ಅರ್ಕಾವತಿ ಯೋಜನೆಯ ಎಡದಂಡೆ ಹಾಗೂ ಬಲದಂಡೆ ನಾಲೆಯ ಕಾಮಗಾರಿಗಳನ್ನು ಪ್ರಾರಂಭದ ಐದು (೫) ಕಿ.ಮೀ. ಪರೆಗೆ ತೆಗೆದುಕೊಳ್ಳಲಾಗಿದ್ದು ಅವು ವಿವಿಧ ಹಂತದಲ್ಲಿವೆ.

ಹಣಕಾಸಿನ ಲಭ್ಯತೆಯನ್ನು ಅವಲಂಬಿಸಿ ೧೯೯೫-೯೬ರ ವೇಳೆಗೆ ಕೆಲಸವು ಪೂರ್ಣಗೊಳ್ಳುವುದು.

ಹಿರೇನಂದಿ ಯಾತ ನೀರಾವರಿ ಯೋಜನೆ ಕುರಿತು

೩೮೩ (೭೪೯) ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹಿರೇನಂದಿ ಯಾತ ನೀರಾವರಿ ಯೋಜನೆ ಯಾವ ಹಂತದಲ್ಲಿರುತ್ತದೆ ?

ಆ) ಇದರ ಅಂದಾಜು ವೆಚ್ಚವೆಷ್ಟು ಹಾಗೂ ಇದರಿಂದ ನೀರಾವರಿಯಾಗುವ ಕ್ಷೇತ್ರವೆಷ್ಟು ?

ಇ) ಈ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಈ) ಈ ಯೋಜನೆಗೆ ಸರ್ಕಾರವು ನಬಾರ್ಡ್‌ದಿಂದ ಸಾಲ ಪಡೆಯಲು ಇರುವ ತೊಂದರೆಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು).—

ಅ) ಅಂದಾಜನ್ನು ಆರ್ಥಿಕ ಸಹಾಯಕ್ಕಾಗಿ ನಬಾರ್ಡ್‌ಗೆ ಸಲ್ಲಿಸಲಾಗಿದೆ.

ಆ) ೧೪.೬೫ ಲಕ್ಷ ರೂಗಳು, ೧೫೫೫ ಹೆಕ್ಟೇರುಗಳು,

ಇ) ಆರ್ಥಿಕ ಸಂಸ್ಥೆಯ ನೆರವು ದೊರೆತ ನಂತರ ಪ್ರಾರಂಭಿಸಲಾಗುವುದು.

ಈ) ಯಾವುದೂ ಇಲ್ಲಾ.

ಘಟಪ್ರಭಾ ನೀರಾವರಿ ಯೋಜನೆ

೩೮೪ (೭೪೮) ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಘಟಪ್ರಭಾ ಬಲದಂಡೆ ಕಾಲುವೆಯ ಕಡಲಗಟ್ಟಿ ಟನಲ್ ಕೆಲಸ ಎಷ್ಟು ಕಿ. ಮೀ. ಇನ್ನೂ ಬಾಕಿ ಉಳಿದಿದೆ ?